ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 01
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOAL2/92/2022, ಇ-791427. ದಿನಾಂಕ:07/07/2022.**

# ಆದೇಶ

ವಿಷಯ: 2022-23 ನೇ ಸಾಲಿನಿಂದ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ- ಟೆಂಡರ್ ಮೂಲಕ ವಿಲೇ ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂ:ಪಸಂಮೀ:125:ಮೀಇಇ:2014 ದಿನಾಂಕ: 21.02.2014.
2) ಆದೇಶ ಸಂಖ್ಯೆ: ಪಸಂಮೀ/ಇ-84/ಮೀಇಇ/2022, ದಿನಾಂಕ: 25/05/2022.
3) ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ದಿನಾಂಕ: 18/06/2022.
4) ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ದಿನಾಂಕ: 02/07/2022.
5) ಕೇಂದ್ರ ಕಛೇರಿಯ ಪತ್ರ ಸಂಖ್ಯೆ: **DOF-TECHOALL2/110/2022, E-800611. ದಿನಾಂಕ: 05/07/2022.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2) ಆದೇಶದಲ್ಲಿ ಪ್ರಸ್ತುತ ಚಾಲ್ತಿಯಲ್ಲಿನ ಒಳನಾಡು ಕಾರ್ಯನೀತಿ-2014 ರನ್ವಯ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಹಾಗೂ ಮೀನುಗಾರರಿಗೆ ಪರವಾನಗಿ ನೀಡುವ ಮುಖಾಂತರ ಮೀನುಗಾರಿಕೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗುತ್ತಿರುವ ಜಲಸಂಪನ್ಮೂಲಗಳನ್ನು ಹೊರತುಪಡಿಸಿ ಉಳಿದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಪ್ರಕ್ರಿಯೆ ಮೂಲಕ 2022-23 ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದಿಂದ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

ಉಲ್ಲೇಖ(3) ಆದೇಶದಲ್ಲಿ ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ

ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಆಯಾ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ಮೀಸಲಾತಿ ನಿಗದಿಪಡಿಸುವಂತೆ ಆದೇಶಿಸಲಾಗಿದೆ.

ಮುಂದುವರೆದಂತೆ ಉಲ್ಲೇಖ(4) ರ ಆದೇಶದಲ್ಲಿ ಪಸಂಮೀ ಇ-104 ಮೀಇಇ 2022, ದಿನಾಂಕ:08/06/2022ರ ಸೇರ್ಪಡೆ ಆದೇಶದಂತೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಮೀನುಗಾರರ ಸಹಕಾರ ಸಂಘಗಳಿಗೆ ನೀಡಿದ ನಂತರದ ಆದ್ಯತೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ನೀಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಮುಂದುವರೆದು ಕೆರೆ/ಜಲಸಂಪನ್ಮೂಲಗಳನ್ನು ನೇರ ಗುತ್ತಿಗೆ ಮೂಲಕ ವಿಲೇ ಮಾಡಿದ ನಂತರ ಬಾಕಿ ಉಳಿದ ಜಲಸಂಪನ್ಮೂಲಗಳನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲು ಆದೇಶಿಸಿರುವಂತೆ ಕೆರೆ/ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲು ಅನುಕೂಲವಾಗುವಂತೆ ಮಾದರಿ ಇ-ಟೆಂಡರ್ ದಸ್ತಾವೇಜು ಅನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ಉಲ್ಲೇಖ(5)ರಲ್ಲಿ ತಿಳಿಸಿರುವ ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಅಡಕ:ಮೇಲಿನಂತೆ,

ಸಹಿ/-
ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ

07/7/22

ಕರ್ನಾಟಕ ಸರ್ಕಾರ

ಮೀನುಗಾರಿಕೆ ಇಲಾಖೆ

# ಕೆರೆ/ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲು ಮಾದರಿ ಇ-ಟೆಂಡರ್ ದಸ್ತಾವೇಜು

**(Standard e-Tender Document)**

---

ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು

## ಭಾಗ-1


| | | ಪುಟ |
|---|---|---|
| **1.** | **ಇ-ಟೆಂಡರ್ ಪ್ರಕಟಣೆ** | **3** |
| **2.** | **ಸಾಮಾನ್ಯ ಷರತ್ತುಗಳು** | **4** |
| **3.** | **ಟೆಂಡರ್‌ದಾರರ ಅರ್ಹತೆ** | **4** |
| **4.** | **ಇ-ಟೆಂಡರ್ ಪ್ರಕ್ರಿಯೆ** | **5** |
| | ತಾಂತ್ರಿಕ ಬಿಡ್ ಸಲ್ಲಿಕೆ | **5** |
| | ಇ.ಎಂ.ಡಿ. ಮತ್ತು ಟೆಂಡರ್ ಶುಲ್ಕಗಳ ಪಾವತಿ | **5** |
| | ಆರ್ಥಿಕ ಬಿಡ್ ಸಲ್ಲಿಕೆ | **6** |
| | ತಾಂತ್ರಿಕ ಬಿಡ್ ಮೌಲ್ಯಮಾಪನ | **6** |
| | ಆರ್ಥಿಕ ಬಿಡ್ ಮೌಲ್ಯಮಾಪನ | **6** |
| | ಇ-ಟೆಂಡರ್ ಅಂತಿಮಗೊಳಿಸಿ ಯಶಸ್ವಿಬಿಡ್‌ದಾರರ ಘೋಷಣೆ | |
| **5.** | **ನಮೂನೆ-1: ಟೆಂಡರ್‌ದಾರರು ತಾಂತ್ರಿಕ ಬಿಡ್ ನೊಂದಿಗೆ ಸಲ್ಲಿಸಬೇಕಾದ ಮಾಹಿತಿ ನಮೂನೆ ಮತ್ತು ದೃಢೀಕರಣ** | **8** |


## ಭಾಗ-2


| | | |
|---|---|---|
| **I.** | **ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಮತ್ತು ಟೆಂಡರ್‌ದಾರರಿಗೆ ಪ್ರಮುಖ ಸೂಚನೆಗಳು** | **9** |
| **II.** | **ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಇ-ಟೆಂಡರ್ ಮುಖಾಂತರ ವಿಲೇವಾರಿ ಮಾಡುವಾಗ ಮೀನುಗಾರಿಕೆ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು** | **10** |
| | ಅನುಬಂಧ-1: ಯಶಸ್ವಿ ಟೆಂಡರ್‌ದಾರರು ನಿಗದಿತ ಛಾಪಾ ಕಾಗದದಲ್ಲಿ ಬರೆದು ಕೊಡುವ ಮುಚ್ಚಳಿಕೆ ಪತ್ರದ ಷರತ್ತುಗಳು | **16** |
| | ಅನುಬಂಧ-2: ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ಗುತ್ತಿಗೆ ಪಡೆದ ಟೆಂಡರುದಾರರು/ಬಿಡ್ ದಾರರು ಕಡ್ಡಾಯವಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು | **17** |

ಭಾಗ-1

1. **ಇ-ಟೆಂಡರ್ ಪ್ರಕಟಣೆ**

**ಕರ್ನಾಟಕ ಸರ್ಕಾರ**

**ಮೀನುಗಾರಿಕೆ ಇಲಾಖೆ**

**ಇ-ಟೆಂಡರ್ ಪ್ರಕಟಣೆ ಸಂಖ್ಯೆ:** **ದಿನಾಂಕ:**

......................... ಜಿಲ್ಲೆಯ .................... ತಾಲ್ಲೂಕಿನ ______________ ಗ್ರಾಮದ ___________ (ಕೆರೆಯ/ಜಲಸಂಪನ್ಮೂಲದ ಹೆಸರು) ಕೆರೆಯ / ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ...............ನೇ ಮೀನುಗಾರಿಕೆ ಫಸಲಿ ವರ್ಷದಿಂದ ............ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಂಕ 01/07/ ರಿಂದ 30/06/ ರವರೆಗೆ) ಒಟ್ಟು 5 (ಐದು) ವರ್ಷಗಳ ಅವಧಿಗೆ ಇ-ಟೆಂಡರು ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯನ್ವಯ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರ ಇ-ಸಂಗ್ರಹಣಾ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ..

**ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು**

| ಇ-ಟೆಂಡರ್ ಐಟಂ ಕೋಡ್ | ಕೆರೆ/ ಜಲಸಂಪನ್ಮೂಲದ ಹೆಸರು | ಗ್ರಾಮದ ಹೆಸರು | ಜಲ ವಿಸ್ತೀರ್ಣ / ಅಚ್ಚುಕಟ್ಟು ಪ್ರದೇಶ ಹೆಕ್ಟೇರ್ ಗಳಲ್ಲಿ | ಭದ್ರತಾ ಠೇವಣಿ (ರೂಗಳಲ್ಲಿ) | ಸರ್ಕಾರಿ ಸವಾಲ್ ಮೊತ್ತ (ರೂಗಳಲ್ಲಿ) | ನಿಗದಿ ಪಡಿಸಿದ ಮೀಸಲಾತಿ |
|---|---|---|---|---|---|---|
| | | | | | | |

**ಇ-ಟೆಂಡರ್ ವೇಳಾಪಟ್ಟಿ**

| | |
|---|---|
| ಇ-ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ: | |
| ಇ-ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ ಮತ್ತು ಸಮಯ | |
| ತಾಂತ್ರಿಕ ಬಿಡ್ ತೆರಯುವ ದಿನಾಂಕ ಮತ್ತು ಸಮಯ:<br>ಸ್ಥಳ | |
| ಆರ್ಥಿಕ ಬಿಡ್ ತೆರಯುವ ದಿನಾಂಕ ಮತ್ತು ಸಮಯ:<br>ಸ್ಥಳ | |
| ಇ-ಟೆಂಡರ್ ಪೂರ್ವ ಸಭೆಯ ದಿನಾಂಕ ಮತ್ತು ಸಮಯ :<br>ಸ್ಥಳ | |

**ಸಹಿ/**

ಮೀನುಗಾರಿಕೆ ಸಹಾಯಕ ನಿರ್ದೇಶಕರು

__________ ತಾಲ್ಲೂಕು, ________ ಜಿಲ್ಲೆ

2. **ಸಾಮಾನ್ಯ ಷರತ್ತುಗಳು**

a. ಇ-ಟೆಂಡರ್ ನಲ್ಲಿ ಭಾಗವಹಿಸಲು ಸಂಬಂಧಿಸಿದಂತೆ, ಇ-ಸಂಗ್ರಹಣ ಪೋರ್ಟಲ್ ನೋಂದಣಿ, ಡಿ.ಎಸ್.ಸಿ ಇತ್ಯಾದಿ ಅಗತ್ಯತೆಗಳನ್ನು ಬಿಡ್‌ದಾರರು ಸ್ವತಃ ಪಡೆಯತಕ್ಕದ್ದು. ಇದರಿಂದ ಉಂಟಾಗುವ ವ್ಯತ್ಯಯಗಳಿಗೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

b. ಇ-ಟೆಂಡರ್ ನಲ್ಲಿ ಭಾಗವಹಿಸಲು ನಿಗದಿಪಡಿಸಿದ ಶುಲ್ಕಗಳನ್ನು ಇ-ಸಂಗ್ರಹಣ ಪೋರ್ಟಲ್ ನ ಶಿಷ್ಟಾಚಾರಗಳಂತೆ ಬಿಡ್ ದಾರರು ಪಾವತಿಸಬೇಕಾಗುತ್ತದೆ ಮತ್ತು ಅಂತಹ ಶುಲ್ಕಗಳು ಮರುಪಾವತಿಯಾಗುವುದಿಲ್ಲ.

c. ಒಬ್ಬ ಬಿಡ್ ದಾರರ ಇ-ಟೆಂಡರ್ ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

d. ಬಿಡ್ ದಾರರು ಇಲಾಖೆಯ ಷರತ್ತು ನಿಬಂಧನೆಗಳು ಮತ್ತು ಇ-ಸಂಗ್ರಹಣ ಪೋರ್ಟಲ್ ನ ವಿಧಿ ವಿಧಾನಗಳ ಬಗ್ಗೆ ಸೂಕ್ತ ಮಾಹಿತಿ ಪಡೆಯುವುದು ಅತ್ಯಗತ್ಯ.

e. ಆಸಕ್ತ ಬಿಡ್ ದಾರರು ಜಲಸಂಪನ್ಮೂಲಗಳ ಇ-ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣ ಪೋರ್ಟಲ್ https://eproc.karnataka.gov.in ನಲ್ಲಿ ಪಡೆಯಬಹುದು ಮತ್ತು ಅದೇ ಪೋರ್ಟಲ್ ನಲ್ಲಿ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಿರುತ್ತದೆ.

f. ಇ-ಟೆಂಡರ್ ನಲ್ಲಿ ನೀಡಲಾಗುವ ಕೆರೆ/ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕು ಸರ್ಕಾರದ ಆದೇಶಗಳಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

**2. ಟೆಂಡರ್ ದಾರರ ಅರ್ಹತೆ**

a) ಇ-ಟೆಂಡರ್ ನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.

b) ಇ-ಟೆಂಡರ್ ನಲ್ಲಿ ಭಾಗವಹಿಸುವವರು ಅಪ್ರಾಪ್ತ ವಯಸ್ಕರು / ದಿವಾಳಿ/ ಅಸೌಖ್ಯದ ಮನಸ್ಸಿನವರು ಆಗಿರಬಾರದು.

c) ಇ-ಟೆಂಡರ್ ನಲ್ಲಿ ಭಾಗವಹಿಸುವವರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಡಿಯಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.

d) ಇ-ಟೆಂಡರ್ ನಲ್ಲಿ ಭಾಗವಹಿಸುವವರು ಆಯಾ ಕೆರೆ / ಜಲಸಂಪನ್ಮೂಲವನ್ನು ಯಾವ ವರ್ಗಕ್ಕೆ ಮೀಸಲಾಗಿಡಲಾಗಿದೆಯೋ ಆ ವರ್ಗಕ್ಕೆ ಸೇರಿರಬೇಕು.

**3. ಟೆಂಡರ್ ಪೂರ್ವ ಸಭೆ**

a. ಈ ಟೆಂಡರ್ ದಸ್ತಾವೇಜಿನ ಬಗ್ಗೆ ಸ್ಪಷ್ಟೀಕರಣಗಳನ್ನು ಹಾಗೂ ಹೆಚ್ಚುವರಿ ಮಾಹಿತಿಗಾಗಿ ಯಾವುದೇ ಪ್ರಶ್ನೆಗಳು ಅಥವಾ ವಿನಂತಿಗಳನ್ನು ಇ-ಟೆಂಡರ್ ವೇಳಾಪಟ್ಟಿಯನ್ವಯ ನಿಗದಿಪಡಿಸಿದ ದಿನಾಂಕ ಸಮಯದೊಳಗೆ ಸಂಬಂಧಿಸಿದ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದುಕೊಳ್ಳಬಹುದಾಗಿದೆ.

**4. ಇ-ಟೆಂಡರ್ ಪ್ರಕ್ರಿಯೆ**

I. ತಾಂತ್ರಿಕ ಬಿಡ್ ಸಲ್ಲಿಕೆ

ಟೆಂಡರ್‌ದಾರರು ಸಲ್ಲಿಸಕಾಬೇಕಾದ ದಾಖಲೆಗಳು

a. ಫೋಟೋ ಸಹಿತ ಗುರುತಿನ ಪುರಾವೆ (ಆಧಾರ್, ಡಿಎಲ್, ಪ್ಯಾನ್ ಕಾರ್ಡ್, ಚುನಾವಣೆ ಗುರುತಿನ ಚೀಟಿ)

b. ವಿಳಾಸ ಪುರಾವೆ (ಆಧಾರ್, ಡಿಎಲ್, ರೇಷನ್ ಕಾರ್ಡ್, ಚುನಾವಣೆ ಗುರುತಿನ ಚೀಟಿ, ವಾಸ ಸ್ಥಳ ದೃಢೀಕರಣ)

c. ಮೀಸಲಾತಿ ಬಿಡ್ ಗಾಗಿ ಜಾತಿ ಪ್ರಮಾಣ ಪತ್ರ

II. ತಾಂತ್ರಿಕ ಬಿಡ್‌ನೊಂದಿಗೆ ಬಿಡ್‌ದಾರರು ನಿಗದಿತ ನಮೂನೆಯಲ್ಲಿ ಮಾಹಿತಿ ಭರ್ತಿ ಮಾಡಿ ಸಹಿ ಮಾಡಿದ ಪ್ರತಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು. (ನಮೂನೆ -1)

III. ಇಎಂಡಿ ಮತ್ತು ಟೆಂಡರ್ ಶುಲ್ಕಗಳ ಪಾವತಿ

a. ಇ-ಟೆಂಡರ್ ನಲ್ಲಿ ಪ್ರಕಟಿಸಲಾದ ಜಲ ಸಂಪನ್ಮೂಲಗಳಿಗೆ ನಿಗದಿಪಡಿಸಿದ ಸರ್ಕಾರಿ ಸವಾಲ್‌ನ ಮೊತ್ತವನ್ನು ಇ.ಎಂ.ಡಿ ರೂಪದಲ್ಲಿ ಇ-ಪೋರ್ಟಲ್ ಮೂಲಕ ನಿಗದಿತ ವಿಧಾನಗಳನ್ನು ಅನುಸರಿಸಿ ಪಾವತಿಸಬೇಕು ಪಾವತಿಸಿಬೇಕು.

b. ಇ-ಟೆಂಡರ್ ಗೆ ಸಂಬಂಧಿಸಿದಂತೆ ನಿಗಿದತ ಸಂಸ್ಕರಣ ಶುಲ್ಕವನ್ನು ಇ-ಪೋರ್ಟಲ್ ಮೂಲಕ ನಿಗದಿತ ವಿಧಾನಗಳನ್ನು ಅನುಸರಿಸಿ ಪಾವತಿಸಬೇಕು.

c. ಇ-ಸಂಗ್ರಹಣ ಪೋರ್ಟಲ್ ನಲ್ಲಿ ಪಾವತಿ ಮಾಡಲು ಟೆಂಡರ್‌ದಾರರು ಈ ಕೆಳಗಿನ ಯಾವುದೇ ಒಂದು ಪಾವತಿ ವಿಧಾನಗಳಿಂದ ಆಯ್ಕೆ ಮಾಡಬಹುದು.

   i. ತ್ವರಿತ ಪಾವತಿಗಳು
      - ಕ್ರೆಡಿಟ್ ಕಾರ್ಡ್
      - ಡೆಬಿಟ್ ಕಾರ್ಡ್
      - ನೆಟ್ ಬ್ಯಾಂಕಿಂಗ್

   ii. ಬ್ಯಾಂಕ್ ಮುಖೇನ ಪಾವತಿಗಳು
      - ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (NEFT)
      - ಬ್ಯಾಂಕ್ ಕೌಂಟರ್ ನಲ್ಲಿ ಹಣ ರವಾನೆ (ಐಸಿಐಸಿಐ ಬ್ಯಾಂಕ್ ಮಾತ್ರ)

d. ಯಶಸ್ವಿ ಬಿಡ್ ದಾರರ ಇ.ಎಂ.ಡಿ (ಸರ್ಕಾರಿ ಸವಾಲ್) ಮೊತ್ತವನ್ನು ಹೊರತುಪಡಿಸಿ ಉಳಿದ ಬಿಡ್ ದಾರರ ಇ.ಎಂ.ಡಿ (ಸರ್ಕಾರಿ ಸವಾಲ್) ಮೊತ್ತವನ್ನು ಪೋರ್ಟಲ್ ಮೂಲಕವೆ ಆರ್ಥಿಕ ಬಿಡ್ ಅಂತಿಮಗೊಳಿಸದ ನಂತರ ಹಿಂತಿರುಗಿಸಲಾಗುವುದು.

e. ಒಮ್ಮೆ ಪಾವತಿಯಾದ ಟೆಂಡರ್ ಸಂಸ್ಕರಣ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿಸಲಾಗುವುದಿಲ್ಲ.

f. ನಿಗದಿತ ಇ.ಎಂ.ಡಿ (ಸರ್ಕಾರಿ ಸವಾಲ್) ಮತ್ತು ಟೆಂಡರ್ ಶುಲ್ಕ ಪಾವತಿಯಾಗದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

IV. ಆರ್ಥಿಕ ಬಿಡ್ ಸಲ್ಲಿಕೆ

a. ಟೆಂಡರ್‌ದಾರರು ತಾವು ಪಡೆಯಲಿಚ್ಛಿಸುವ ಕೆರೆ/ಜಲಸಂಪನ್ಮೂಲದ ಐಟಂ ಕೋಡ್ ಬಳಸಿ ನಿಗಿದತ ದಿನಾಂಕ ಸಮಯದೊಳಗೆ ಆರ್ಥಿಕ ಬಿಡ್ ಅನ್ನು ಆನ್‌ಲೈನ್ ಮೂಲಕ ನಿಗದಿತ ಅಂಕಣದಲ್ಲಿ ಪೂರ್ಣ ಅಂಕಿಗಳಲ್ಲಿ ನಮೂದಿಸಿ ಸಲ್ಲಿಸತಕ್ಕದ್ದು.

b. ನಿಗದಿತ ದಿನಾಂಕ ಮತ್ತು ಸಮಯದ ನಂತರ ಸಲ್ಲಿಕೆಯಾದ ಬಿಡ್ ಮೊತ್ತವನ್ನು ಬದಲಿಸಲು ಅವಕಾಶವಿರುವುದಿಲ್ಲ.

V. ತಾಂತ್ರಿಕ ಬಿಡ್ ಮೌಲ್ಯಮಾಪನ

a. ನಿಗದಿಪಡಿಸಿದ ದಿನಾಂಕ ಸಮಯದಂದು ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ತಾಂತ್ರಿಕ ಬಿಡ್ ಮೌಲ್ಯಮಾಪನ ನಡೆಸಿ ಇ-ಟೆಂಡರ್ ಷರತ್ತು ನಿಯಮಾನುಸಾರ ಅರ್ಹ ಬಿಡ್‌ದಾರರನ್ನು ಅಂತಿಮಗೊಳಿಸತಕ್ಕದ್ದು.

VI. ಆರ್ಥಿಕ ಬಿಡ್ ಮೌಲ್ಯಮಾಪನ

a. ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಟೆಂಡರ್‌ದಾರರ ಆರ್ಥಿಕ ಬಿಡ್ ನ್ನು ಮಾತ್ರ ನಿಗದಿಪಡಿಸಿದ ದಿನಾಂಕ ಸಮಯದಂದು ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಇ-ಸಂಗ್ರಹಣ ಪೋರ್ಟಲ್‌ನಲ್ಲಿ ತೆರೆಯತಕ್ಕದ್ದು.

VII. ಇ-ಟೆಂಡರ್ ಅಂತಿಮಗೊಳಿಸಿ ಯಶಸ್ವಿ ಬಿಡ್‌ದಾರರ ಘೋಷಣೆ

a. ಮೀನು ಪಾಶುವಾರು ಹಕ್ಕಿನ ಇ-ಟೆಂಡರ್ ಮುಗಿದ ಕೂಡಲೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರುದಾರರು ಈಗಾಗಲೇ ಪಾವತಿಸಿರುವ ಸರ್ಕಾರಿ ಸವಾಲ್ ನ (ಇ.ಎಂ.ಡಿ) ಮೊತ್ತವನ್ನು ಹೊರತುಪಡಿಸಿ ಉಳಿಕೆ ಬಿಡ್ ಮೊತ್ತವನ್ನು ಆರ್ಥಿಕ ಬಿಡ್ ತೆರೆದ 24 ಗಂಟೆಗಳೊಳಗೆ ಕಚೇರಿ ವೇಳೆಯಲ್ಲಿ "ಮೀನುಗಾರಿಕೆ ಸಹಾಯಕ ನಿರ್ದೇಶಕರು, _____ ತಾಲ್ಲೂಕು" ಇವರ ಹೆಸರಿನಲ್ಲಿ ನಗದು ಹುಂಡಿ ಪಡೆದು ಪಾವತಿ ಮಾಡಿ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ಇದರೊಂದಿಗೆ ಸದರಿ ಕೆರೆ/ಜಲಸಂಪನ್ಮೂಲಕ್ಕೆ ನಿಗದಿಪಡಿಸಿದ ಭದ್ರತಾ ಠೇವಣಿಯ ಮೊತ್ತಕ್ಕೆ ಪ್ರತ್ಯೇಕ ನಗದು ಹುಂಡಿ ಪಡೆದು ಪಾವತಿಸತಕ್ಕದ್ದು.

b. ಒಂದು ವೇಳೆ ಪಾವತಿಸಬೇಕಾದ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ಮುಂದಿನ ಕಾರ್ಯ ದಿನದಂದು (Next working Day) ಪಾವತಿಸತಕ್ಕದ್ದು. ತಪ್ಪಿದಲ್ಲಿ ಸದರಿ ಇ-ಟೆಂಡರ್ ಬಗ್ಗೆ ಅವರು ನೀಡಲಾಗಿದ್ದ ಇ.ಎಂ.ಡಿ (ಸರ್ಕಾರಿ ಸವಾಲ್) ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

c. ಒಂದು ವೇಳೆ ಗರಿಷ್ಟ ಬಿಡ್ ನಮೂದಿಸಿದ ಟೆಂಡರ್‌ದಾರರು ಹಣಪಾವತಿಸಲು ವಿಫಲರಾದಲ್ಲಿ, ಆಖೈರಾದ ಗರಿಷ್ಠ ಇ-ಟೆಂಡರ್ ಮೊತ್ತವನ್ನು 2ನೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು ಪಾವತಿಸಲು ಒಪ್ಪಿದಲ್ಲಿ ಹಾಗೂ ಅವರು ಸದರಿ ಮೊತ್ತವನ್ನು ಅವರಿಗೆ ಸೂಚಿಸಿದ 24 ಗಂಟೆಗಳ ಒಳಗೆ ಇಎಂಡಿ ಮೊತ್ತವನ್ನು ಹೊರತುಪಡಿಸಿ ಉಳಿಕೆ ಆರ್ಥಿಕ ಬಿಡ್ ಮೊತ್ತವನ್ನು ಮತ್ತು ಭದ್ರತಾ ಠೇವಣಿಯೊಂದಿಗೆ ಪಾವತಿಸಿದಲ್ಲಿ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು

ವಿಲೇಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮ ಕೈಗೊಳ್ಳತಕ್ಕದ್ದು. ಒಂದು ವೇಳೆ 2ನೇ ಅತೀ ಹೆಚ್ಚಿನ ಟೆಂಡರುದಾರರು ಇದಕ್ಕೆ ಒಪ್ಪದಿದ್ದಲ್ಲಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಯ ಅನುಮೋದನೆ ಪಡೆದು ಇ-ಟೆಂಡರ್ ಮೂಲಕ ಮರುವಿಲೇವಾರಿಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮಕೈಗೊಳ್ಳತಕ್ಕದ್ದು.

d. ಆಖೈರಾದ ಟೆಂಡರ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಅಂತಹ ಇ-ಟೆಂಡರ್ ಪ್ರಕ್ರಿಯೆಯನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯೇ ರದ್ದುಗೊಳಿಸಿ ಮರುವಿಲೇವಾರಿಗೆ ಕ್ರಮ ಕೈಗೊಳ್ಳತಕ್ಕದ್ದು. 2ನೇ ಬಾರಿಯೂ ಸಹ ಆಖೈರಾದ ಬಿಡ್ ಮೊತ್ತ ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಇ-ಟೆಂಡರ್ ರದ್ದುಗೊಳಿಸಿ 3ನೇ ಬಾರಿಗೆ ಮರುವಿಲೇಗೊಳಿಸುವುದು. 3ನೇ ಬಾರಿಗೆ ಆಖೈರಾದ ಟೆಂಡರ್ ಮೊತ್ತವನ್ನು ಒಪ್ಪಿಕೊಳ್ಳುವುದು.

e. ಇ-ಟೆಂಡರ್ ನಲ್ಲಿ ಭಾಗವಹಿಸಿದ ಬಿಡ್ ದಾರರು ಒಂದು ವೇಳೆ ಒಂದೇ ಬಿಡ್ ಮೊತ್ತವನ್ನು ಒಬ್ಬರಿಗಿಂತ ಹೆಚ್ಚಿನವರು ನಮೂದಿಸಿದ್ದಲ್ಲಿ, ಆರ್ಥಿಕ ಬಿಡ್ ತೆರೆದ ಸಂದರ್ಭದಲ್ಲಿ ಹಾಜರಿರುವ ಬಿಡ್ ದಾರರ ಸಮುಖದಲ್ಲಿ ಲಾಟರಿ ಮೂಲಕ ಬಿಡ್ ದಾರರನ್ನು ಆಯ್ಕೆ ಮಾಡತಕ್ಕದ್ದು.

f. ಇ-ಟೆಂಡರ್ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

g. ಇಲಾಖಾ ನಿಯಮಾನುಸಾರ ಯಶಸ್ವಿ ಬಿದ್ ದಾರರು ರೂ 200/- ಛಾಪಾ ಕಾಗದದಲ್ಲಿ ಇಲಾಖೆಯ ಷರತ್ತು ಮತ್ತು ನಿಬಂದನೆಗಳಿಗೆ ಒಪ್ಪಿ ಮುಚ್ಚಳಿಕೆ ಪತ್ರವನ್ನು ಬರೆದು ನೋಟರೀಕರಿಸಿ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರಿಗೆ ಸಲ್ಲಿಸತಕ್ಕದ್ದು ಮತ್ತು ಅನ್ವಯಿಸುವ ಮುದ್ರಾಂಕ ಶುಲ್ಕವನ್ನು ಪಾವತಿಸಿ ರಸೀದಿ ಪಡೆಯತಕ್ಕದ್ದು.

**ನಮೂನೆ-1**

## ಟೆಂಡರ್‌ದಾರರು ತಾಂತ್ರಿಕ ಬಿಡ್ ನೊಂದಿಗೆ ಸಲ್ಲಿಸಬೇಕಾದ ಮಾಹಿತಿ ನಮೂನೆ ಮತ್ತು ದೃಢೀಕರಣ

| ಕ್ರ.ಸಂ | ವಿವರ | |
|---|---|---|
| 1. | ಟೆಂಡರ್‌ದಾರರ ಹೆಸರು | |
| | ಸಂಪೂರ್ಣ ವಿಳಾಸ<br><br>ತಾಲ್ಲೂಕು<br>ಜಿಲ್ಲೆ<br>ಪಿನ್ | |
| | ಮೊಬೈಲ್ ಸಂಖ್ಯೆ<br><br>ಇಮೇಲ್ ಐಡಿ(Email ID) | |
| | ಇ-ಟೆಂಡರ್ ಸಲ್ಲಿಸಲಿರುವ ಕೆರೆ ಹೆಸರು<br>ಗ್ರಾಮ | |
| | ಪಾವತಿಸಿದ ಇಎಂಡಿ (ಸರ್ಕಾರಿ ಸವಾಲ್) ಮೊತ್ತ ರೂ<br><br>ಪಾವತಿ ವಿಧಾನ (ಚಲನ್, ಆನ್ಲೈನ್) ವಿವರ | |
| | ಕೋರಲಾದ ಮೀಸಲಾತಿ ವರ್ಗ | |
| | ಸಲ್ಲಿಸಲಾದ ದಾಖಲಾತಿಗಳು<br>೧. ಗುರುತಿನ ಪುರಾವೆ<br>೨. ವಿಳಾಸ ಪುರಾವೆ<br>೩. ಜಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ) | |

ಈ ಮೂಲಕ ದೃಢೀಕರಿಸುವದೇನೆಂದರೆ, ನಾನು ಈ ಮೇಲೆ ತಿಳಿಸಿರುವ ಮಾಹಿತಿ ಸತ್ಯವಾಗಿದ್ದು, ಒಂದು ವೇಳೆ ನಾನು ಸಲ್ಲಿಸಿರುವ ಮಾಹಿತಿ ಸುಳ್ಳು ಎಂದು ಸಾಬೀತಾದಲ್ಲಿ ನನ್ನ ಇ-ಟೆಂಡರ್ ಅರ್ಜಿಯನ್ನು ತಿರಸ್ಕರಿಸಬಹುದು ಹಾಗೂ ಅಗತ್ಯ ಕಾನೂನು ಕ್ರಮವಹಿಸಬಹುದಾಗಿದೆ. ನಾನು ಕೆರೆ/ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕಿನ ಇ-ಟೆಂಡರ್‌ಗೆ ಸಂಬಂಧಿಸಿದ ಷರತ್ತು ನಿಬಂಧನೆಗಳನ್ನು ತಿಳಿದುಕೊಂಡಿರುತ್ತೇನೆ ಹಾಗೂ ಅವುಗಳಿಗೆ ಬದ್ದನಾಗಿರುತ್ತೇನೆ

ದಿನಾಂಕ:

ಸ್ಥಳ: ಬಿಡ್‌ದಾರರ ಸಹಿ

**(ವಿ.ಸೂ: ತಾಂತ್ರಿಕ ಬಿಡ್‌ನೊಂದಿಗೆ ಕಡ್ಡಾಯವಾಗಿ ಅಪ್ಲೋಡ್ ಮಾಡತಕ್ಕದ್ದು)**

# ಭಾಗ-2

## I. ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಮತ್ತು ಟೆಂಡರ್‌ದಾರರಿಗೆ ಪ್ರಮುಖ ಸೂಚನೆಗಳು

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 125 ಮೀಇಇ 2013 ಬೆಂಗಳೂರು ದಿನಾಂಕ 21-02-2014, ಪಸಂಮೀ ಇ-149 ಮೀಇಇ 2021 ದಿನಾಂಕ: 25-11-2021 ಹಾಗೂ , ಪಸಂಮೀ ಇ-70 ಮೀಇಇ 2022 ದಿನಾಂಕ: 18-06-2022ರ ಆದೇಶಗಳ ಮೇರೆಗೆ ಕರ್ನಾಟಕ ರಾಜ್ಯ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳನ್ನು ಇ-ಟೆಂಡರ್ ಮೂಲಕ ವಿಲೇವಾರಿ ಸಂಬಂಧ ಈ ಕೆಳಗಿನ ಪ್ರಮುಖ ಸೂಚನೆಗಳು, ಷರತ್ತು ನಿಬಂಧನೆಗಳನ್ನು ಜಲ ಸಂಪನ್ಮೂಲಗಳ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲಾ ಪಾಲುದಾರರು / ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಒಂದು ವೇಳೆ ಯಾವುದೇ ರೀತಿಯಲ್ಲಿ ಈ ದಸ್ತಾವೆಜಿನಲ್ಲಿರುವ ಷರತ್ತು ಮತ್ತು ನಿಬಂಧನೆಗಳು ಹಾಗೂ ಸರ್ಕಾರದ ಆದೇಶಗಳ ಷರತ್ತು ನಿಬಂಧನೆಗಳಿಗೆ ಭಿನ್ನವಾಗಿದಲ್ಲಿ ಸರ್ಕಾರದ ಆದೇಶಗಳ ಷರತ್ತು ನಿಬಂದನೆಗಳು ಅನ್ವಯವಾಗುತ್ತದೆಂದು ತಿಳಿಯತಕ್ಕದ್ದು.
2. ಇ-ಟೆಂಡರ್ ಪ್ರಕಟಣೆ ಮಾಡುವ ಸಮಯದಲ್ಲಿ ಜಾರಿಯಲ್ಲಿರುವ ಸರ್ಕಾರದ ಆದೇಶ / ನಿಯಮಗಳನುಸಾರ ಈ ದಸ್ತಾವೇಜಿನ ಷರತ್ತು, ನಿಬಂಧನೆ ಇತ್ಯಾದಿ ಅಂಶಗಳನ್ನು ಬದಲಿಸುವ / ಸೇರ್ಪಡೆಗೊಳಿಸುವ ಅಧಿಕಾರ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಇರುತ್ತದೆ.
3. ಸದರಿ ಇ-ಟೆಂಡರ್ ದಸ್ತಾವೇಜಲ್ಲಿ ವಿಧಿಸಿರುವ ಷರತ್ತು ನಿಬಂಧನೆಗಳ ಹೊರತಾಗಿ ಸಂಬಂಧಿಸಿದ ಪ್ರಾಧಿಕಾರವು ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.
4. ಇ-ಟೆಂಡರ್ ನಲ್ಲಿ ಭಾಗವಹಿಸಲು ಸಂಬಂಧಿಸಿದಂತೆ, ಇ-ಸಂಗ್ರಹಣ ಪೋರ್ಟಲ್ ನೋಂದಣಿ, ಡಿ.ಎಸ್.ಸಿ ಇತ್ಯಾದಿ ಅಗತ್ಯತೆಗಳನ್ನು ಬಿಡ್ ದಾರರು ಸ್ವತಃ ಪಡೆಯತಕ್ಕದ್ದು. ಇದರಿಂದ ಉಂಟಾಗುವ ವ್ಯತ್ಯಯಗಳಿಗೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.
5. ಇ-ಟೆಂಡರ್ ನಲ್ಲಿ ಭಾಗವಹಿಸಲು ನಿಗದಿಪಡಿಸಿದ ಶುಲ್ಕಗಳನ್ನು ಇ-ಸಂಗ್ರಹಣ ಪೋರ್ಟಲ್ ನ ಶಿಷ್ಟಾಚಾರಗಳಂತೆ ಬಿಡ್‌ದಾರರು ಪಾವತಿಸಬೇಕಾಗುತ್ತದೆ ಮತ್ತು ಅಂತಹ ಶುಲ್ಕಗಳು ಮರುಪಾವತಿಯಾಗುವುದಿಲ್ಲ.
6. ಒಬ್ಬ ಬಿಡ್ ದಾರರ ಇ-ಟೆಂಡರ್ ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.
7. ಬಿಡ್ ದಾರರು ಇಲಾಖೆಯ ಷರತ್ತು ನಿಬಂಧನೆಗಳು ಮತ್ತು ಇ-ಸಂಗ್ರಹಣ ಪೋರ್ಟಲ್ ನ ವಿಧಿ ವಿಧಾನಗಳ ಬಗ್ಗೆ ಸೂಕ್ತ ಮಾಹಿತಿ ಪಡೆಯುವುದು ಅತ್ಯಗತ್ಯ.
8. ಆಸಕ್ತ ಬಿಡ್ ದಾರರು ಜಲಸಂಪನ್ಮೂಲಗಳ ಇ-ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣ ಪೋರ್ಟಲ್ https://eproc.karnataka.gov.in ನಲ್ಲಿ ಪಡೆಯಬಹುದು ಮತ್ತು ಅದೇ ಪೋರ್ಟಲ್ ನಲ್ಲಿ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಿರುತ್ತದೆ.

**II. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಇ-ಟೆಂಡರ್ ಮುಖಾಂತರ ವಿಲೇವಾರಿ ಮಾಡುವಾಗ ಮೀನುಗಾರಿಕೆ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು**

1. ಎಲ್ಲೆಲ್ಲಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಆದ್ಯತೆಯಲ್ಲಿನ ಮೀನುಗಾರರ ಸಹಕಾರ ಸಂಘಗಳು / ಮೀನು ಉತ್ಪಾದಕರ ಸಂಸ್ಥೆಗಳು ಮುಂದೆ ಬರುವುದಿಲ್ಲವೋ ಆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲು ಪಸಂಮೀ ಇ-70 ಮೀಇಇ 2022 ದಿನಾಂಕ: 18-06-2022ರನ್ವಯ ಸೂಕ್ತ ಮೀಸಲಾತಿಗಳನ್ನು ನಿಗದಿಪಡಿಸಿ ಇ-ಟೆಂಡರ್ ಪ್ರಕಟಣೆಯನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಹೊರಡಿಸತಕ್ಕದ್ದು.
2. ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಉದ್ದೇಶಿಸಲಾದ ಒಳನಾಡು ಜಲಸಂಪನ್ಮೂಲಗಳ ಇ-ಟೆಂಡರ್ ಪ್ರಕಟಣೆಗಳನ್ನು ಈ ಆದೇಶದ ಅನುಬಂಧ-2 ರಲ್ಲಿನಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಕಟಣೆಯ ಕರಪತ್ರಗಳನ್ನು ಕೆರೆಯ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್, ತಾಲ್ಲೂಕಿನ ತಹಶೀಲ್ದಾರವರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಇ-ಟೆಂಡರ್ ಪ್ರಕಟಣೆಯನ್ನು ಕೆರೆಯ ವ್ಯಾಪ್ತಿಯ ಗ್ರಾಮ/ಗ್ರಾಮಗಳಲ್ಲಿ ಸಾರ್ವಜನಿಕರಿಗೆ ವ್ಯಾಪಕವಾಗಿ ಇಸ್ತಿಹಾರ್ ಹಂಚಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕು.
3. ಮೀನುಗಾರಿಕೆ ಅಧಿಕಾರಿಯು ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ ಕನಿಷ್ಟ 15 ದಿನಗಳ ಕಾಲಾವಕಾಶ ನೀಡಿ ಇ-ಟೆಂಡರ್ ನಲ್ಲಿ ಆಸಕ್ತರು ಬಿಡ್ ಮಾಡಲು ಅವಕಾಶ ಕಲ್ಪಿಸತಕ್ಕದ್ದು. ಇ-ಟೆಂಡರ್ ದಸ್ತಾವೇಜನ್ನು ಇಲಾಖೆಯು ಸಿದ್ಧಪಡಿಸಿದ ಮಾದರಿ ನಮೂನೆಯಲ್ಲಿ ತಯಾರಿಸಿ ಅದರಂತೆ ಇ-ಸಂಗ್ರಹಣಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
4. ನೀರು ತುಂಬಿದ ಒಳನಾಡು ಜಲಸಂಪನ್ಮೂಲಗಳ ಸರ್ವೇಕ್ಷಣೆ ನಡೆಸಿ ಅವುಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಮೂರು ಸುತ್ತಿನಲ್ಲಿ ನಡೆಸತಕ್ಕದ್ದು. ಪೂರ್ಣವಾಗಿ ಅಥವಾ ಅರ್ಧಕ್ಕಿಂತ ಹೆಚ್ಚು ತುಂಬಿದ ಕೆರೆಗಳನ್ನು ಮೊದಲನೇ ಸುತ್ತಿನಲ್ಲಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಮೇ-ಜೂನ್ ತಿಂಗಳಿನಲ್ಲಿ, ಎರಡನೇ ಸುತ್ತನ್ನು ಜುಲೈ-ಆಗಸ್ಟ್ ತಿಂಗಳಿನಲ್ಲಿ ಮತ್ತು ಮೂರನೇ ಹಾಗೂ ಅಂತಿಮ ಸುತ್ತನ್ನು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ನಡೆಸತಕ್ಕದ್ದು.
5. ಎಲ್ಲಾ ಜಲಸಂಪನ್ಮೂಲಗಳ ವಿಲೇವಾರಿ ಪ್ರಕ್ರಿಯೆಯನ್ನು ಮೀನುಗಾರಿಕೆ ಫಸಲಿ ವರ್ಷ ಪ್ರಾರಂಭವಾದ 4 ತಿಂಗಳೊಳಗಾಗಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಅಕ್ಟೋಬರ್ ಮಾಹೆಯ ಅಂತ್ಯದೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.

6. 3ನೇ ಸುತ್ತಿನ ನಂತರ ವಿಲೇವಾರಿಯಾಗದ ಕೆರೆಗಳ ಪಟ್ಟಿಯನ್ನು ತಯಾರು ಮಾಡಿ ವಿಲೇವಾರಿಯಿಂದ ವಿನಾಯಿತಿ ಆದೇಶವನ್ನು ಮೀನುಗಾರಿಕೆ ನಿರ್ದೇಶಕರಿಂದ ಪಡೆಯಲು ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.
7. ಇ-ಟೆಂಡರ್ ಮೂಲಕ ಜಲ ಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಪಡೆಯಲು ಇಚ್ಛಿಸುವವರು ಇ-ಸಂಗ್ರಹಣಾ ಪೋರ್ಟಲ್ ನಲ್ಲಿ ನೋಂದಾಯಿಸಿಕೊಂಡು ಭಾಗವಹಿಸತಕ್ಕದ್ದು.
8. ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆಯು ಆಯಾ ಕೆರೆ/ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕಿನ ವಿಲೇವಾರಿಗೆ **ನಿಗದಿಪಡಿಸಿದ ಸರ್ಕಾರಿ ಸವಾಲ್ ಮೊತ್ತವನ್ನು ಇ.ಎಂ.ಡಿ ರೂಪದಲ್ಲಿ** ಮತ್ತು ನಿಗದಿತ ಸಂಸ್ಕರಣ ಶುಲ್ಕವನ್ನು ಇ-ಸಂಗ್ರಹಣಾ ಪೋರ್ಟಲ್ ಮೂಲಕ ಮಾತ್ರ ಪಾವತಿಸಿ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.
9. ಸಂಬಂಧಿಸಿದ ಜಲಸಂಪನ್ಮೂಲದ ಹಿಂದಿನ ವರ್ಷದ ಆದಾಯದ ಶೇ.50 ರಷ್ಟು ಮೊತ್ತವನ್ನು ಸರ್ಕಾರಿ ಸವಾಲು ಅಥವಾ ಕನಿಷ್ಠ ಬಿಡ್ ಮೊತ್ತವೆಂದು ಪರಿಗಣಿಸುವುದು.
10. ಆಯಾ ಕೆರೆ/ಜಲಸಂಪನ್ಮೂಲದ ವಿಲೇವಾರಿಗಾಗಿ ಭದ್ರತಾ ಠೇವಣಿ ಮೊತ್ತವನ್ನು ಆಯಾ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15 ರಷ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರಿಗೆ ರೂ.300.00 ರಂತೆ (ರೂಪಾಯಿ ಮೂರು ನೂರು ಮಾತ್ರ) ನಿಗದಿಪಡಿಸತಕ್ಕದ್ದು,
11. ಯಶಸ್ವಿ ಇ-ಟೆಂಡರ್‌ದಾರರ ಭದ್ರತಾ ಠೇವಣಿ ಮೊತ್ತವನ್ನು ಬಡ್ಡಿರಹಿತವಾಗಿ ಗುತ್ತಿಗೆಯ ಅವಧಿಯು ಮುಗಿದನಂತರ ಅವರಿಗೆ ರೀಫಂಡ್ ಬಿಲ್ ಮುಖಾಂತರ ಮರುಪಾವತಿಸತಕ್ಕದ್ದು. ಒಂದು ವೇಳೆ ಆಖೈರಾದ - ಬಿಡ್‌ದಾರರು ಗುತ್ತಿಗೆ ಮೊತ್ತ ಪಾವತಿಸದಿದ್ದಲ್ಲಿ ಅಥವಾ ಗುತ್ತಿಗೆ ಅವಧಿಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.
12. ಯಶಸ್ವಿಯಾಗದ ಇ-ಟೆಂಡರ್‌ದಾರರ ಠೇವಣಿ ಮೊತ್ತವನ್ನು ಅವರಿಗೆ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಇ-ಸಂಗ್ರಹಣಾ ಪೋರ್ಟಲ್ ಮೂಲಕ ಮರು ಪಾವತಿಸಲು ಕ್ರಮವಹಿಸವುದು.
13. ಇ-ಸಂಗ್ರಹಣಾ ಪೋರ್ಟಲ್ ನಲ್ಲಿ ನಿಗದಿತ ದಿನಾಂಕದಂದು ಸಂಬಂಧಿಸಿದ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರು ತಾಂತ್ರಿಕ ಮೌಲ್ಯಮಾಪನ ಮಾಡಿ ಮೀಸಲಾತಿಯನ್ವಯ ಅರ್ಹ ಇ-ಟೆಂಡರ್ ದಾರರನ್ನು ನಿಯಮಾನುಸಾರ ಅಂತಿಮಗೊಳಿಸಿ ಇ-ಟೆಂಡರ್ ಪ್ರಕ್ರಿಯೆ ನಡೆಸತಕ್ಕದ್ದು.
14. ಇ-ಸಂಗ್ರಹಣಾ ಪೋರ್ಟಲ್‌ನಲ್ಲಿ ನಿಗದಿತ ದಿನಾಂಕದಂದು ಸಂಬಂಧಿಸಿದ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರು ಆರ್ಥಿಕ ಬಿಡ್ ಅನ್ನು ಇ-ಸಂಗ್ರಹಣಾ ಪೋರ್ಟಲ್‌ನಲ್ಲಿ ತೆರೆಯತಕ್ಕದ್ದು.

15. ಮೀನು ಪಾಶುವಾರು ಹಕ್ಕಿನ ಇ-ಟೆಂಡರ್‌ನ ಆರ್ಥಿಕ ಬಿಡ್ ತೆರದ ನಂತರ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರುದಾರರು ಈಗಾಗಲೇ ಪಾವತಿಸಿರುವ ಸರ್ಕಾರಿ ಸವಾಲ್‌ನ (ಇ.ಎಂ.ಡಿ) ಮೊತ್ತವನ್ನು ಹೊರತುಪಡಿಸಿ ಉಳಿಕೆ ಬಿಡ್ ಮೊತ್ತವನ್ನು ಆರ್ಥಿಕ ಬಿಡ್ ತೆರದ 24 ಗಂಟೆಗಳೊಳಗೆ ಕಚೇರಿ ವೇಳೆಯಲ್ಲಿ "ಮೀನುಗಾರಿಕೆ ಸಹಾಯಕ ನಿರ್ದೇಶಕರು, ___________ ತಾಲ್ಲೂಕು" ಇವರ ಹೆಸರಿನಲ್ಲಿ ನಗದು ಹುಂಡಿ ಪಡೆದು ಪಾವತಿ ಮಾಡಿ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ಇದರೊಂದಿಗೆ ಸದರಿ ಕೆರೆ/ಜಲಸಂಪನ್ಮೂಲಕ್ಕೆ ನಿಗದಿಪಡಿಸಿದ ಭದ್ರತಾ ಠೇವಣಿಯ ಮೊತ್ತಕ್ಕೆ ಪ್ರತ್ಯೇಕ ನಗದು ಹುಂಡಿ ಪಡೆದು ಪಾವತಿಸತಕ್ಕದ್ದು.
16. ಒಂದು ವೇಳೆ ಪಾವತಿಸಬೇಕಾದ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ಮುಂದಿನ ಕಚೇರಿ ಕಾರ್ಯ ದಿನದಂದು (Next working Day) ಪಾವತಿಸತಕ್ಕದ್ದು. ತಪ್ಪಿದಲ್ಲಿ ಸದರಿ ಇ-ಟೆಂಡರ್ ಬಗ್ಗೆ ಅವರು ನೀಡಲಾಗಿದ್ದ ಇ.ಎಂ.ಡಿ (ಸರ್ಕಾರಿ ಸವಾಲ್) ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
17. ಒಂದು ವೇಳೆ ಗರಿಷ್ಠ ಬಿಡ್ ನಮೂದಿಸಿದ ಟೆಂಡರ್‌ದಾರರು ಹಣಪಾವತಿಸಲು ವಿಫಲರಾದಲ್ಲಿ, ಆಖೈರಾದ ಗರಿಷ್ಠ ಇ-ಟೆಂಡರ್ ಮೊತ್ತವನ್ನು 2ನೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು ಪಾವತಿಸಲು ಒಪ್ಪಿದಲ್ಲಿ ಹಾಗೂ ಅವರು ಸದರಿ ಮೊತ್ತವನ್ನು ಅವರಿಗೆ ಸೂಚಿಸಿದ 24 ಗಂಟೆಗಳ ಒಳಗೆ ಇಎಂಡಿ ಮೊತ್ತವನ್ನು ಹೊರತುಪಡಿಸಿ ಉಳಿಕೆ ಆರ್ಥಿಕ ಬಿಡ್ ಮೊತ್ತವನ್ನು ಮತ್ತು ಭದ್ರತಾ ಠೇವಣಿಯೊಂದಿಗೆ ಪಾವತಿಸಿದಲ್ಲಿ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮ ಕೈಗೊಳ್ಳತಕ್ಕದ್ದು. ಒಂದು ವೇಳೆ 2ನೇ ಅತೀ ಹೆಚ್ಚಿನ ಟೆಂಡರುದಾರರು ಇದಕ್ಕೆ ಒಪ್ಪದಿದ್ದಲ್ಲಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಯ ಅನುಮೋದನೆ ಪಡೆದು ಇ-ಟೆಂಡರ್ ಮೂಲಕ ಮರುವಿಲೇವಾರಿಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮಕೈಗೊಳ್ಳತಕ್ಕದ್ದು.
18. ಆಖೈರಾದ ಟೆಂಡರ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಅಂತಹ ಇ-ಟೆಂಡರ್ ಪ್ರಕ್ರಿಯೆಯನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯೇ ರದ್ದುಗೊಳಿಸಿ ಮರುವಿಲೇವಾರಿಗೆ ಕ್ರಮ ಕೈಗೊಳ್ಳತಕ್ಕದ್ದು. 2ನೇ ಬಾರಿಯೂ ಸಹ ಆಖೈರಾದ ಬಿಡ್ ಮೊತ್ತ ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಇ-ಟೆಂಡರ್ ರದ್ದುಗೊಳಿಸಿ 3ನೇ ಬಾರಿಗೆ ಮರುವಿಲೇಗೊಳಿಸುವುದು. 3ನೇ ಬಾರಿಗೆ ಆಖೈರಾದ ಟೆಂಡರ್ ಮೊತ್ತವನ್ನು ಒಪ್ಪಿಕೊಳ್ಳುವುದು.
19. ಇ-ಟೆಂಡರ್ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.
20. ಇ-ಟೆಂಡರ್ ಪ್ರಕ್ರಿಯೆ ಮುಗಿದ ಒಂದು ವಾರದೊಳಗಾಗಿ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ದೃಢೀಕರಣ ಆದೇಶ ಪಡೆಯಲು ಎಲ್ಲಾ ದಾಖಲಾತಿಗಳೊಂದಿಗೆ ಸೂಕ್ತ

ಪ್ರಸ್ತಾವನೆಯನ್ನು ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು. ಇ-ಟೆಂಡರ್ ದೃಢೀಕರಣ ಆದೇಶ ಕೋರಿ ಬಂದ ಪ್ರಸ್ತಾವನೆಗಳನ್ನು ಒಂದು ವಾರದೊಳಗಾಗಿ ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳು ಮತ್ತು ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ಆದೇಶವನ್ನು ಹೊರಡಿಸುವುದು. ಅಧಿಕಾರ ವ್ಯಾಪ್ತಿ ಮೀರಿದ ಪ್ರಸ್ತಾವನೆಗಳನ್ನು ಅವರ ಕಛೇರಿಗೆ ತಲುಪಿದ ಒಂದು ವಾರದೊಳಗಾಗಿ ಅವರ ಮೇಲಾಧಿಕಾರಿಗೆ ಸಲ್ಲಿಸುವುದು. ಪ್ರಾರಂಭದಲ್ಲೇ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರಸ್ತಾವನೆಯೊಡನೆ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳು ಚೆಕ್ ಲಿಸ್ಟ್‌ಗಳನ್ನು ಪರಿಶೀಲಿಸಿಕೊಂಡು ಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

21. ಇ-ಟೆಂಡರ್ ಮುಖಾಂತರ ಪಡೆದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯಲ್ಲಿ 2ನೇ ಈ ವರ್ಷದಿಂದ ಪ್ರತಿವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗೆ ಪ್ರತ್ಯಾಯೋಜಿಸಲಾಗಿದೆ. ಎರಡನೇ ವರ್ಷ ಮತ್ತು ತದನಂತರದ ವಾರ್ಷಿಕ ಇ-ಟೆಂಡರ್ ಮೊತ್ತವನ್ನು ಬಿಡ್‌ದಾರರು ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದ ಮುನ್ನ ಅಂದರೆ ಏಪ್ರಿಲ್ 30ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು, ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಬಿಡ್‌ದಾರರಿಗೆ. ಬಿಡ್ ಮೊತ್ತದ ಬೇಡಿಕೆ ನೋಟೀಸನ್ನು "ನೋಂದಣಿ . ಅಂಚೆ ಸ್ವೀಕೃತಿ ಬಾಕಿ" ಮುಖಾಂತರ ರವಾನಿಸುವುದು. ಈ ನೋಟೀಸ್ ನೀಡಿದ ನಂತರವೂ ಬಿಡ್‌ದಾರರು ನಿಗದಿತ ಅವಧಿಯೊಳಗಾಗಿ ಗುತ್ತಿಗೆ ಮೊತ್ತವನ್ನು ಪಾವತಿಸಿ ನವೀಕರಿಸಿಕೊಳ್ಳದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅವರ ಹರಾಜು ದೃಢೀಕರಣ ಆದೇಶವನ್ನು ರದ್ದುಪಡಿಸುವ , ಅಧಿಕಾರವನ್ನು ಗುತ್ತಿಗೆ ದೃಢೀಕರಿಸಿದ ಸಕ್ಷಮ ಪ್ರಾಧಿಕಾರ / ಮೀನುಗಾರಿಕೆ ನಿರ್ದೇಶಕರು ಹೊಂದಿರುತ್ತಾರೆ. ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮರುವಿಲೇವಾರಿಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ. ಹಿಂದಿನ ಗುತ್ತಿಗೆ ಆದೇಶವನ್ನು ರದ್ದುಪಡಿಸಿದ ನಂತರವೇ ಹೊಸ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ನೀಡುವುದು.

22. ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವುದು.

23. ಟೆಂಡರ್‌ದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಜಲಸಂಪನ್ಮೂಲಗಳಲ್ಲಿ ಇಲಾಖೆಯ ಅಧಿಕಾರಿಗಳು ಶಿಫಾರಸ್ಸು ಮಾಡುವ ಪ್ರಮಾಣದ ಅನುಮೋದಿತ ತಳಿಯ ಬಲಿತ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ : ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ

ಮಾಡತಕ್ಕದ್ದು, ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ನೀಡತಕ್ಕದ್ದು.

24. ಯಾವುದೇ ಅಥವಾ ಎಲ್ಲಾ ಇ-ಟೆಂಡರ್ ಪ್ರಸ್ತಾವನೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ / ಸರ್ಕಾರಕ್ಕೆ ಇರುತ್ತದೆ. ಯಾವುದೇ ಕಾರಣ ನೀಡದೆ ಇ-ಟೆಂಡರ್ ತಿರಸ್ಕರಿಸಿ ಮರು ಇ-ಟೆಂಡರ್ ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ. .

25. ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಮೈಟ್, ಸಿಡಿಮದ್ದು, ವಿಷ ಅಥವಾ ರಾಸಾಯನಿಕ ವಸ್ತುಗಳನ್ನು ಪ್ರಯೋಗಿಸಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಟೆಂಡರುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

26. ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ಪಡೆದ ಯಾವುದೇ ಟೆಂಡರುದಾರರು ನಿಷೇಧಿತ ಮೀನುಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್‌ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಇತ್ಯಾದಿಗಳನ್ನು ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಟೆಂಡರುದಾರರಿಂದ ಈ ನಿಷೇಧಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

27. ಟೆಂಡರುದಾರರು / ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು. ಹಾನಿಯುಂಟಾದಲ್ಲಿ ಟೆಂಡರ್ /ಬಿಡ್‌ದಾರರ ಮೇಲೆ ಕ್ರಮವಹಿಸತಕ್ಕದ್ದು.

28. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದ ಟೆಂಡರುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಕ್ಷಮ ಪ್ರಾಧಿಕಾರವು ರದ್ದುಪಡಿಸತಕ್ಕದ್ದು. ಹಾಗೂ ಸರ್ಕಾರವು / ಮೀನುಗಾರಿಕೆ ನಿರ್ದೇಶಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು / ಟೆಂಡರುದಾರರು ಬದ್ಧರಾಗಿರತಕ್ಕದ್ದು. ಈ

ದಿಶೆಯಲ್ಲಿ ಅನುಬಂಧ-1 ರಲ್ಲಿನ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.200-೦೦ರ ಮೌಲ್ಯದ ನೋಟರೀಕೃತ ಛಾಪಾ ಕಾಗದದಲ್ಲಿ ಟೆಂಡರುದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

**ಅನುಬಂಧ-1**

**ಯಶಸ್ವಿ ಟೆಂಡರ್‌ದಾರರು ನಿಗದಿತ ಛಾಪಾ ಕಾಗದದಲ್ಲಿ ಬರೆದು ಕೊಡುವ ಮುಚ್ಚಳಿಕೆ ಪತ್ತದ ಷರತ್ತುಗಳು**

........................ ಜಿಲ್ಲೆಯ ................. ತಾಲ್ಲೂಕಿನ .......................... ಗ್ರಾಮಕ್ಕೆ `ಸೇರಿದ ............ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು...ಸ...ಎರಡು ಸಾವಿರದ............ ನೇ ಇಸವಿ ........... ಮಾಹೆಯ ........................ನೇ ದಿನಾಂಕದಲ್ಲಿ ನಡೆದ ಇ-ಟೆಂಡರ್ ಮೂಲಕ ಅತೀ ಹೆಚ್ಚಿನ ಸವಾಲು ಮಾಡಿ ಗುತ್ತಿಗೆಗೆ ಪಡೆದು ಈ ದಿನ ಅಂದರೆ ದಿನಾಂಕ ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು , ............................ ತಾಲ್ಲೂಕು ಇವರಿಗೆ ನಾನು/ನಾವು ಖುದ್ದು ಬರೆದು ಕೊಟ್ಟು ಮುಚ್ಚಳಿಕೆ ಪತ್ರ

ಸದರಿ ಜಲಸಂಪನ್ಮೂಲದ .ಮೀನು ಪಾಶುವಾರು ಹಕ್ಕನ್ನು ದಿನಾಂಕ ............. ರಿಂದ ..................... ದಿನಾಂಕದವರೆಗೆ ಗುತ್ತಿಗೆ ಮೂಲಕ ಪಡೆದಿರುತ್ತೇನೆ/ವೆ. ಇದರ ಇ-ಟೆಂಡರ್ ಮೊತ್ತ ಅಂದರೆ ರೂ. ............ಗಳನ್ನು ಮತ್ತು ಇದಕ್ಕೆ ಸಂಬಂಧಿಸಿದ ಭದ್ರತಾ ಠೇವಣಿ ಮೊತ್ತ ರೂ................ಗಳನ್ನು ಅಂದರೆ ಈ ರೀತಿಯಾಗಿ ಒಟ್ಟು ರೂ. ............ ಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ............... ರವರಿಗೆ ಬ್ಯಾಂಕ್ ನಗದು ಹುಂಡಿ (........................ ಬ್ಯಾಂಕಿನ ಡಿ.ಡಿ. ಸಂ. ............. ದಿನಾಂಕ ....................ರ) ಮುಖಾಂತರ ಪಾವತಿ ಮಾಡಿ ರಸೀದಿ ಪಡೆದಿರುತ್ತೇನೆ/ವೆ.

ಈ ಜಲಸಂಪನ್ಮೂಲದಲ್ಲಿ ಮೀನು ಕೃಷಿ ಕೈಗೊಳ್ಳುವಾಗ ಗುತ್ತಿಗೆಗೆ ಪಡೆದಿರುವ ಪೂರ್ಣ ಅವಧಿಯಲ್ಲಿ ಈ ಮುಚ್ಚಳಿಕೆ ಪತ್ರಕ್ಕೆ ಲಗತ್ತಿಸಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು (ಈ ಆದೇಶದ ಅನುಬಂಧ-14 ರಲ್ಲಿ ಲಗತ್ತಿಸಿದೆ) ಹಾಗೂ ಸರ್ಕಾರವು / ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ಬದ್ಧರಾಗಿರುತ್ತೇನೆ/ಬದ್ಧರಾಗಿರುತ್ತೇವೆ. ಒಂದು ವೇಳೆ ಸದರಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ನನಗೆ ನಮಗೆ ನೀಡಿದ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಆದೇಶವನ್ನು ರದ್ದುಗೊಳಿಸುವ ಹಾಗೂ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಕ್ರಮವು ನನಗೆ/ನಮಗೆ ಒಪ್ಪಿಗೆಯಾಗಿರುತ್ತದೆ.

ಈ ಗುತ್ತಿಗೆ ಅವಧಿಯ ನಂತರ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕು ನನಗೆ/ನಮಗೆ ಇರುವುದಿಲ್ಲವೆಂಬುದು ಕೂಡ ನನಗೆ/ನಮಗೆ ಮನವರಿಕೆಯಾಗಿರುತ್ತದೆ.

ದಿನಾಂಕ:

ಯಶಸ್ವಿ ಟೆಂಡರ್‌ದಾರರ ಸಹಿ ಮತ್ತು ಹೆಸರು
ಪೂರ್ಣ ವಿಳಾಸ
ದೂರವಾಣಿ ಸಂಖ್ಯೆ

ಸಾಕ್ಷಿಗಳು

**(ವಿ.ಸೂ:- ರೂ.200-00ರ ಮೌಲ್ಯದ ಛಾಪ ಕಾಗದದಲ್ಲಿ ನೋಟರೀಕರಿಸಿ ಟೆಂಡರ್‌ದಾರರು ಬರೆದು ಕೊಡಬೇಕಾದ ಮುಚ್ಚಳಿಕೆ ಪತ್ರ)**

ಅನುಬಂಧ-2

## ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ಗುತ್ತಿಗೆ ಪಡೆದ ಟೆಂಡರುದಾರರು/ಬಿಡ್ ದಾರರು ಕಡ್ಡಾಯವಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1. ಇ-ಟೆಂಡರ್ ಮೂಲಕ ಗುತ್ತಿಗೆಗೆ ಪಡೆದ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15 ರ ಭಾಗಕ್ಕೆ ಪ್ರತಿ ಹೆಕ್ಟೇರಿಗೆ ರೂ.300-00 ರಂತೆ ಬಡ್ಡಿ ರಹಿತ ಭದ್ರತಾ ಠೇವಣಿ ಮೊತ್ತವನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನಗದು ಹುಂಡಿ ಮುಖಾಂತರ ಪಾವತಿಸುವುದು.
2. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಭದ್ರತಾ ಠೇವಣಿ ಮೊತ್ತವನ್ನು - ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಅವಧಿಯು ಮುಗಿದ ನಂತರ ಟೆಂಡರ್‌ದಾರರು/ಬಿಡ್‌ದಾರರಿಗೆ ಮರುಪಾವತಿಸಲಾಗುವುದು.
3. ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಮತ್ತು ಹರಾಜು ಮೂಲಕ ಗರಿಷ್ಠ ಐದು (05) ವರ್ಷಗಳ ಅವಧಿಗೆ ವಿಲೇವಾರಿ ಮಾಡಲಾಗುವುದು.
4. ಇ-ಟೆಂಡರ್ ಮೂಲಕ ಆಖೈರಾದ ಅತೀ ಹೆಚ್ಚಿನ ಬಿಡ್ ಮೊತ್ತವನ್ನು ಪ್ರಥಮ ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸಲಾಗುವುದು. ಉಳಿದ ನಾಲ್ಕು ವರ್ಷಗಳಲ್ಲಿ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ.5 ರಂತೆ ಹೆಚ್ಚಿಸಿ ನಿಗದಿಪಡಿಸಲಾಗುವುದು
5. ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಇಲಾಖಾ ಮೇಲಾಧಿಕಾರಿಗಳಿಗೆ/ಸರ್ಕಾರಕ್ಕೆ ಇರುತ್ತದೆ. ಅಲ್ಲದೆ ಸರ್ಕಾರದ ಹಿತದೃಷ್ಟಿಯಿಂದ ಟೆಂಡರ್ ಅನ್ನು ತಿರಸ್ಕರಿಸಿ ಮರುವಿಲೇವಾರಿ ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ.
6. ಮೀನುಗಾರಿಕೆ ಫಸಲಿ ವರ್ಷವು ಪ್ರತಿ ವರ್ಷದ ಜುಲೈ 1 ರಿಂದ ಮರು ವರ್ಷದ ಜೂನ್ 30 ರವರೆಗೆ ಇರುತ್ತದೆ. ಮೀನು ಪಾಶುವಾರು ಹಕ್ಕನ್ನು ಟೆಂಡರ್ ಮಾಡಿದ ದಿನಾಂಕವನ್ನು ಮತ್ತು ದೃಢೀಕರಣ ಮಾಡಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಮೀನು ಪಾಶುವಾರು ಹಕ್ಕಿನ ಅವಧಿಯು ಪ್ರತಿ ವರ್ಷ ಜುಲೈ 1 ರಿಂದ ಮುಂದಿನ ವರ್ಷದ ಜೂನ್ 30 ರವರೆಗೆ ಮಾತ್ರ ಇರುತ್ತದೆ.
7. ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆ ಅವಧಿಯ ಎರಡನೇ ವರ್ಷದ ಮತ್ತು ತದನಂತರದ ವಾರ್ಷಿಕ ಟೆಂಡರ್ ಮೊತ್ತವನ್ನು ಪ್ರತಿ ವರ್ಷ ಏಪ್ರಿಲ್ 30ರೊಳಗಾಗಿ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿಯಲ್ಲಿ ಪಾವತಿಸಿ ಗುತ್ತಿಗೆ ನವೀಕರಿಸಿಕೊಳ್ಳತಕ್ಕದ್ದು. ಒಂದು ವೇಳೆ ಗುತ್ತಿಗೆಯನ್ನು ನವೀಕರಿಸಿಕೊಳ್ಳದಿದ್ದ ಪ್ರಕರಣದಲ್ಲಿ ಟೆಂಡರ್‌ದಾರರಿಗೆ ಮೀನು ಪಾಶುವಾರು ಹಕ್ಕು ಇರುವುದಿಲ್ಲ. ಗುತ್ತಿಗೆಗೆ ಪಡೆಯಲಾದ ಮೀನು ಪಾಶುವಾರು ಹಕ್ಕನ್ನು ರದ್ದುಗೊಳಿಸಿ ಮರುವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
8. ಟೆಂಡರ್‌ದಾರರು/ಬಿಡ್‌ದಾರರು ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕೂ ಇತರರಿಗೆ ವರ್ಗಾಯಿಸತಕ್ಕದ್ದಲ್ಲ ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವುದು.

9. ಟೆಂಡರ್‌ದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಜಲಸಂಪನ್ಮೂಲಗಳಲ್ಲಿ ಇಲಾಖೆಯ ಅಧಿಕಾರಿಗಳು ಶಿಫಾರಸ್ಸು ಮಾಡುವ ಪ್ರಮಾಣದ ಅನುಮೋದಿತ ತಳಿಯ ಬಲಿತ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ : ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು, ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ನೀಡತಕ್ಕದ್ದು.
10. ಯಾವುದೇ ಅಥವಾ ಎಲ್ಲಾ ಇ-ಟೆಂಡರ್ ಪ್ರಸ್ತಾವನೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ / ಸರ್ಕಾರಕ್ಕೆ ಇರುತ್ತದೆ. ಯಾವುದೇ ಕಾರಣ ನೀಡದೆ ಇ-ಟೆಂಡರ್ ತಿರಸ್ಕರಿಸಿ ಮರು ಇ-ಟೆಂಡರ್ ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗೆ ಸೇರಿರುತ್ತದೆ. .
11. ಇ- ಟೆಂಡರ್ ಮುಖಾಂತರ ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಮೈಟ್, ಸಿಡಿಮದ್ದು, ವಿಷ ಅಥವಾ ರಾಸಾಯನಿಕ ವಸ್ತುಗಳನ್ನು ಪ್ರಯೋಗಿಸಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಟೆಂಡರುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಭದ್ರತಾ ಠೇವಣಿ ಮೊತ್ತ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.
12. ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ಪಡೆದ ಯಾವುದೇ ಟೆಂಡರುದಾರರು ನಿಷೇಧಿತ ಮೀನುಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್‌ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಇತ್ಯಾದಿಗಳನ್ನು ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಟೆಂಡರುದಾರರಿಂದ ಈ ನಿಷೇಧಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.
13. ಟೆಂಡರುದಾರರು / ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು. ಹಾನಿಯುಂಟಾದಲ್ಲಿ ಟೆಂಡರ್ / ಬಿಡ್‌ದಾರರ ಮೇಲೆ ಕ್ರಮವಹಿಸತಕ್ಕದ್ದು.
14. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದ

ಟೆಂಡರುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಕ್ಷಮ ಪ್ರಾಧಿಕಾರವು ರದ್ದುಪಡಿಸತಕ್ಕದ್ದು.

15. ಯಶಸ್ವಿ ಟೆಂಡರ್‌ದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನು ಹಿಡಿಯುವ ಮೀನುಗಾರರಿಗೆ ಜೀವ ರಕ್ಷಣಾ ಕವಚ (ಲೈಫ್ ಜಾಕೆಟ್) ಹಾಗೂ ವಿಮಾ ಸೌಲಭ್ಯವನ್ನು ಕಡ್ಡಾಯವಾಗಿ ಒದಗಿಸುವುದು.
16. ಯಶಸ್ವಿ ಟೆಂಡರ್‌ದಾರರು ಗುತ್ತಿಗೆಗೆ ಪಡೆಯಲಾದ ಜಲಸಂಪನ್ಮೂಲದಲ್ಲಿ ಸಂಶೋಧನೆ, ವಿಸ್ತರಣೆ ಮತ್ತು ಇತರೆ ಉತ್ತೇಜನ ಪೂರ್ವಕ ಚಟುವಟಿಕೆಗಳನ್ನು ಕೈಗೊಳ್ಳುವ ಹಕ್ಕು ಮೀನುಗಾರಿಕೆ ಇಲಾಖೆಗೆ ಇರುತ್ತದೆ.
17. ಸರ್ಕಾರವು / ಮೀನುಗಾರಿಕೆ ನಿರ್ದೇಶಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು / ಟೆಂಡರುದಾರರು ಬದ್ಧರಾಗಿರತಕ್ಕದ್ದು.

ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತೇನೆಂದು ದೃಢೀಕರಿಸುತ್ತೇವೆ..

ಸ್ಥಳ:

ದಿನಾಂಕ:

ಯಶಸ್ವಿ ಟೆಂಡರ್‌ದಾರರ/ಬಿಡ್‌ದಾರರ ಸಹಿ ಮತ್ತು ಹೆಸರು
ಪೂರ್ಣ ವಿಳಾಸ
ದೂರವಾಣಿ ಸಂಖ್ಯೆ

-ಸಾಕ್ಷಿಗಳು

(1)

(2)

(3)

**(ವಿ.ಸೂ:- ರೂ.200-00ರ ಮೌಲ್ಯದ ಛಾಪ ಕಾಗದದಲ್ಲಿ ನೋಟರೀಕರಿಸಿ ಟೆಂಡರ್‌ದಾರರು/ಬಿಡ್‌ದಾರರು ಅನುಬಂಧ-1 ರ ಮುಚ್ಚಳಿಕೆ ಪತ್ರದೊಡನೆ ಬರೆದುಕೊಡಬೇಕು)**